هدية

HĀDIYAH

# ಇಸ್ಲಾಮ್

## ಸಹಜ, ತಾರ್ಕಿಕ ಮತ್ತು ನೈಸರ್ಗಿಕ ಧರ್ಮ

الإسلام دين الفطرة والعقل والسعادة

ಕನ್ನಡ

كنادي

ಮಸ್ಜಿದುಲ್-ಹರಾಮ್ ಮತ್ತು ಮಸ್ಜಿದು
ನ್ನಬವಿಯ ಧಾರ್ಮಿಕ ವ್ಯವಹಾರಗಳ
ಅಧ್ಯಕ್ಷತೆಯ ಅಡಿಯಲ್ಲಿರುವ ವೈಜ್ಞಾನಿಕ ಸಮಿತಿ

# الإِسْلَامُ

# دِينُ الفِطْرَةِ وَالعَقْلِ وَالسَّعَادَةِ

## ಇಸ್ಲಾಮ್

## ಸಹಜ, ತಾರ್ಕಿಕ ಮತ್ತು ನೈಸರ್ಗಿಕ ಧರ್ಮ


اللَّجْنَةُ العِلْمِيَّةُ

بِرِئَاسَةِ الشُّؤُونِ الدِّينِيَّةِ بِالمَسْجِدِ الحَرَامِ وَالمَسْجِدِ النَّبَوِيِّ

ಮಸ್ಜಿದುಲ್-ಹರಾಮ್ ಮತ್ತು ಮಸ್ಜಿದುನ್ನಬವಿಯ ಧಾರ್ಮಿಕ ವ್ಯವಹಾರಗಳ ಅಧ್ಯಕ್ಷತೆಯ ಅಡಿಯಲ್ಲಿರುವ ವೈಜ್ಞಾನಿಕ ಸಮಿತಿ

بِسْمِ اللّٰهِ الرَّحْمَنِ الرَّحِيمِ

# ಇಸ್ಲಾಮ್

# ಸಹಜ, ತಾರ್ಕಿಕ ಮತ್ತು ನೈಸರ್ಗಿಕ ಧರ್ಮ

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

ನೀವು ಸ್ವತಃ ನಿಮ್ಮನ್ನು ಪ್ರಶ್ನಿಸಿದ್ದೀರಾ:

ಆಕಾಶಗಳು ಮತ್ತು ಭೂಮಿ ಹಾಗು ಅವುಗಳ ಮಧ್ಯೆ ಇರುವ ಮಹಾನ್ ಸೃಷ್ಟಗಳ ಸೃಷ್ಟಿಕರ್ತ ಯಾರು? ಮತ್ತು ಈ ನಿಖರವಾದ ವ್ಯವಸ್ಥೆಯನ್ನು ರಚಿಸಿದವರು ಯಾರು?

ಈ ಮಹಾನ್ ಪ್ರಪಂಚವು ನಿಖರವಾಗಿ ನಿಯಂತ್ರಿಸುವ ತನ್ನ ನಿಯಮಗಳೊಂದಿಗೆ ಇಷ್ಟು ವರ್ಷಗಳವರೆಗೆ ಕ್ರಮಬದ್ಧವಾಗಿ ಮತ್ತು ಸ್ಥಿರವಾಗಿ ಹೇಗೆ ನಡೆಯುತ್ತಿದೆ?

ಈ ಜಗತ್ತು ತನ್ನಷ್ಟಕ್ಕೆ ತಾನೇ ಸೃಷ್ಟಿಯಾಗಿದೆಯೇ? ಅಥವಾ ಶೂನ್ಯದಿಂದ ಅಸ್ತಿತ್ವಕ್ಕೆ ಬಂದಿದೆಯೇ? ಅಥವಾ ಎಲ್ಲವೂ ಆಕಸ್ಮಿಕವಾಗಿ ಸಂಭವಿಸಿದೆಯೇ?

## ನಿಮ್ಮನ್ನು ಸೃಷ್ಟಿಸಿದವರು ಯಾರು?

ನಿಮ್ಮ ದೇಹದ ಅಂಗಗಳಲ್ಲಿ ಮತ್ತು ಸಜೀವಿಗಳ ದೇಹಗಳಲ್ಲಿ ಈ ಸೂಕ್ಷ್ಮ ವ್ಯವಸ್ಥೆಯನ್ನು ರಚಿಸಿದರು ಯಾರು?

ಈ ಕಟ್ಟಡವನ್ನು ಯಾರೂ ರಚಿಸದೆ ಸ್ವಂತವಾಗಿ ಅಸ್ತಿತ್ವಕ್ಕೆ ಬಂದಿದೆ ಅಥವಾ ಶೂನ್ಯವು ಈ

ಕಟ್ಟಡವನ್ನು ಅಸ್ತಿತ್ವಕ್ಕೆ ತಂದಿದೆ ಎಂದು ಯಾವುದೇ ಬುದ್ಧಿವಂತ ವ್ಯಕ್ತಿಗೆ ಹೇಳಿದರೆ ಎಂದಿಗೂ ಅವನು ಈ ಮಾತನ್ನು ಸ್ವೀಕರಿಸುವುದಿಲ್ಲ. ಪರಿಸ್ಥಿತಿ ಹೀಗಿರುವಾಗ ಈ ವಿಶಾಲ ಜಗತ್ತು ಯಾವುದೇ ಸೃಷ್ಟಿಕರ್ತನಿಲ್ಲದೆ ಅಸ್ತಿತ್ವಕ್ಕೆ ಬಂದಿದೆ ಎಂದು ಹೇಳುವವರ ಮಾತನ್ನು ಅವನು ಹೇಗೆ ಸ್ವೀಕರಿಸುತ್ತಾನೆ ಜಗತ್ತಿನ ನಿಖರವಾದ ಈ ವ್ಯವಸ್ಥೆ ಆಕಸ್ಮಿಕವಾಗಿ ಅಸ್ಥಿತ್ವಕ್ಕೆ ಬಂದಿದೆ ಎಂದು ಓರ್ವ ಬುದ್ಧಿವಂತ ವ್ಯಕ್ತಿಗೆ ಹೇಳಿದರೆ ಅವನು ಇದನ್ನು ಹೇಗೆ ಸ್ವೀಕರಿಸಲಿಕ್ಕೆ ಸಾಧ್ಯ?

ನಿಸ್ಸಂಶಯವಾಗಿ, ಈ ಬ್ರಹ್ಮಾಂಡದ ಮತ್ತು ಅದರಲ್ಲಿರುವ ವಸ್ತುಗಳ ಆರಾಧ್ಯ ದೈವ, ಸೃಷ್ಟಿಕರ್ತ, ನಿಯಂತ್ರಕ ಮತ್ತು ಜಗದೊಡೆಯನಿದ್ದಾನೆ. ಆತನೇ ಸರ್ವಶಕ್ತ ಅಲ್ಲಾಹು.

ಸರ್ವಶಕ್ತ ಅಲ್ಲಾಹು ನಮ್ಮ ಕಡೆಗೆ ಅನೇಕ ಸಂದೇಶವಾಹಕರನ್ನು ಕಳುಹಿಸಿದನು ಮತ್ತು ಅವರ ಮೇಲೆ ದಿವ್ಯ ಗ್ರಂಥಗಳನ್ನು ಇಳಿಸಿದನು. ಅಂತಿಮ ದಿವ್ಯ ಗ್ರಂಥವೆಂದರೆ ಪವಿತ್ರ ಕುರ್‌ಆನ್, ಅದು ಕೊನೆಯ ಪ್ರವಾದಿ ಮುಹಮ್ಮದ್ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಅವರ ಮೇಲೆ ಇಳಿಸಲ್ಪಟ್ಟಿದೆ. ಈ ಸಂದೇಶವಾಹಕರ ಮತ್ತು ಗ್ರಂಥಗಳ ಮೂಲಕ ಅಲ್ಲಾಹನು:

ಅವನು (ಅಲ್ಲಾಹನು) ತನ್ನ ಅಸ್ತಿತ್ವ, ತನ್ನ ಗುಣಗಳ ಬಗ್ಗೆ, ನಮ್ಮ ಮೇಲೆ ಅವನ ಹಕ್ಕುಗಳ ಬಗ್ಗೆ ಮತ್ತು ಅವನ ಮೇಲೆ ನಮ್ಮ ಹಕ್ಕುಗಳ ಬಗ್ಗೆ ನಮಗೆ ತಿಳಿಸಿದನು.

• ಅವನು (ಅಲ್ಲಾಹನು) ನಮಗೆ ತಿಳಿಸಿದನು — ನಾನೇ ನಿಮ್ಮ ರಬ್ಬ್, ನಾನು ನಿಮ್ಮನ್ನು ಸೃಷ್ಟಿಸಿದ್ದೇನೆ. ನಾನು ಜೀವಂತನಾಗಿದ್ದೇನೆ ಮತ್ತು ನನಗೆ ಎಂದಿಗೂ ಮರಣವಿಲ್ಲ. ಸಂಪೂರ್ಣ ಸೃಷ್ಟಿ ನನ್ನಅಧೀನದಲ್ಲಿವೆ ಮತ್ತು ನನ್ನ ಆದೇಶಕ್ಕೆ ಒಳಗಾಗಿವೆ.

ಅವನ (ಅಲ್ಲಾಹನ) ಗುಣಗಳಲ್ಲಿ ಒಂದು ಮಹತ್ವದ ಗುಣ 'ಜ್ಞಾನ'ವಾಗಿದೆ. ಅವನ ಜ್ಞಾನವು ಎಲ್ಲವನ್ನೂ ಆವರಿಸಿಕೊಂಡಿದೆ. ಅವನು ಎಲ್ಲವನ್ನೂ ಕೇಳುವವನೂ, ಎಲ್ಲವನ್ನೂ ನೋಡುವವನೂ ಆಗಿದ್ದಾನೆ. ಭೂಮಿಯಲ್ಲಾಗಲಿ ಅಥವಾ ಆಕಾಶದಲ್ಲಾಗಲಿ, ಯಾವುದೇ ವಿಷಯವೂ ಅವನಿಂದ ಅಡಗಿಹೋಗುವುದಿಲ್ಲ.

ಮಹೋನ್ನತ ರಬ್ಬ್ ಸದಾ ಜೀವಂತನಾಗಿರುವವನಾಗಿದ್ದು, ಪ್ರತಿಯೊಂದು ಸೃಷ್ಟಿಗೆ ಜೀವ ನೀಡುವವನು. ಅವನೇ ಎಲ್ಲರನ್ನೂ ನಿರ್ವಹಿಸುವವನು, ಎಲ್ಲ ಸೃಷ್ಟಿಗಳ ಬದುಕು ಅವನಿಂದಲೇ ಸ್ಥಿರವಾಗಿರುತ್ತದೆ. ಸರ್ವಶಕ್ತ ಅಲ್ಲಾಹು ಹೇಳುತ್ತಾನೆ:

﴿اللَّهُ لا إِلَهَ إِلَّا هُوَ الْحَيُّ الْقَيُّومُ لا تَأْخُذُهُ سِنَةٌ وَلا نَوْمٌ لَهُ مَا فِي السَّمَوَاتِ وَمَا فِي الأَرْضِ مَنْ ذَا الَّذِي يَشْفَعُ عِنْدَهُ إِلَّا بِإِذْنِهِ يَعْلَمُ مَا بَيْنَ أَيْدِيهِمْ وَمَا خَلْفَهُمْ وَلا يُحِيطُونَ بِشَيْءٍ مِنْ عِلْمِهِ إِلَّا بِمَا شَاءَ وَسِعَ كُرْسِيُّهُ السَّمَوَاتِ وَالأَرْضَ وَلا يَئُودُهُ حِفْظُهُمَا وَهُوَ الْعَلِيُّ الْعَظِيمُ ﴿٢٥٥﴾﴾

ಅಲ್ಲಾಹ್ ಚಿರಂತನು, ಸ್ವಯಂ ಜೀವಂತನು, ಅಖಿಲ ಪ್ರಪಂಚದ ನಿಯಂತ್ರಕನಾದ ಆತನ ಹೊರತು

ಆರಾಧ್ಯನಾರೂ ಇಲ್ಲ. ಅವನಿಗೆ ತೂಕಡಿಕೆಯಾಗಲೀ ನಿದ್ರೆಯಾಗಲೀ ಬಾದಿಸುವುದಿಲ್ಲ. ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿ ಇರುವುದೆಲ್ಲವೂ ಆತನದೇ. ಆತನ ಸನ್ನಿಧಿಯಲ್ಲಿ ಆತನ ಅಪ್ಪಣೆವಿಲ್ಲದೆ ಶಿಫಾರಸು ಮಾಡತಕ್ಕವನಾರಿದ್ದಾನೆ? ದಾಸರ ಮುಂದಿರುವುದನ್ನು ಆತನು ಬಲ್ಲನು. ಅವರಿಂದ ಮರೆಯಾಗಿರುವುದನ್ನೂ ಆತನು ಬಲ್ಲನು. ಆತನು ಸ್ವತಃ ತಿಳಿಯಗೊಳಿಸುವ ಹೊರತು ಆತನ ಜ್ಞಾನ ಭಂಡಾರದಿಂದ ಯಾವ ವಿಷಯವನ್ನೂ ಅವರು ತಿಳಿಯಲಾರರು. ಅವನ ಅಧಿಕಾರವು ಆಕಾಶಗಳನ್ನೂ ಭೂಮಿಯನ್ನೂ ವ್ಯಾಪಿಸಿದೆ. ಅವುಗಳ ಸಂರಕ್ಷಣೆಯು ಆತನಿಗೆ ದಣಿಸುವಂಥ ಕಾರ್ಯವಲ್ಲ. ಅವನು ಏಕೈಕ ಮಹೋನ್ನತನೂ ಸರ್ವಶ್ರೇಷ್ಠನೂ ಆಗಿರುತ್ತಾನೆ.

[ಸೂರ ಬಕರ:255 ]

• ಅವನು ನಮಗೆ ತಿಳಿಸಿದನು — ಅವನು ಎಲ್ಲಾ ಸಂಪೂರ್ಣ ಗುಣಗಳಿಂದ ವರ್ಣಿತನಾಗಿದ್ದಾನೆ. ಅವನು ನಮಗೆ ಬುದ್ಧಿ ಮತ್ತು ಅರಿವು ನೀಡಿದನು, ಇದರಿಂದ ನಾವು ಅವನ ಅದ್ಭುತ ಸೃಷ್ಟಿ ಮತ್ತು ಶಕ್ತಿಯನ್ನು ಅನುಭವಿಸಬಹುದು, ಮತ್ತು ಇದು ನಮಗೆ ಅವನ ಮಹಿಮೆಯನ್ನು, ಶಕ್ತಿಯನ್ನು ಹಾಗು ಸಂಪೂರ್ಣ ಗುಣಗಳನ್ನು ಅರಿಯಲು ದಾರಿ ಮಾಡಿಕೊಡುತ್ತದೆ. ಮಹೋನ್ನತ ರಬ್ಬ್ ಸಂಪೂರ್ಣನು ಮತ್ತು ಅವನಲ್ಲಿ ಯಾವ ದೋಷವಿಲ್ಲ.

• ಅವನು ನಮಗೆ ತಿಳಿಸಿದನು — ಅವನು ಆಕಾಶಗಳ ಮೇಲಿದ್ದಾನೆ. ಅವನು ಈ ಭೂಮಿಯ ವ್ಯಾಪ್ತಿಯಲ್ಲಿ

ಇಲ್ಲ ಮತ್ತು ಈ ಭೂಮಿ ಅವನಲ್ಲಿ ಸಮಾವೇಶಗೊಂಡಿಲ್ಲ.

• ಅವನು ನಮಗೆ ತಿಳಿಸಿದನು — ಅವನ ಮುಂದೆ ಶರಣಾಗುವುದು (ತಲೆ ಬಗ್ಗಿಸುವುದು) ನಮ್ಮ ಕರ್ತವ್ಯವಾಗಿದೆ. ಏಕೆಂದರೆ ಅವನೇ ನಮ್ಮ ಮತ್ತು ಈ ಸೃಷ್ಟಿಯ ಸೃಷ್ಟಿಕರ್ತ ಮತ್ತು ನಿಯಂತ್ರಕ.

ಹೀಗಾಗಿ, ಸೃಷ್ಟಿಕರ್ತ ಮಹಿಮೆಯ ಗುಣಗಳಿಂದ ಕೂಡಿದವನು, ಮತ್ತು ಅವನು ಯಾವುದೇ ಅಗತ್ಯ ಅಥವಾ ದೋಷದಿಂದ ಕೂಡಿರಲು ಸಾಧ್ಯವಿಲ್ಲ. ರಬ್ಬ್ ಎಂದಿಗೂ ಮರೆಯುವುದಿಲ್ಲ, ನಿದ್ರಿಸುವುದಿಲ್ಲ, ಆಹಾರ ಸೇವಿಸುವುದಿಲ್ಲ ಮತ್ತು ಅವನಿಗೆ ಹೆಂಡತಿ ಅಥವಾ ಮಕ್ಕಳಿರುವುದಿಲ್ಲ. ಸೃಷ್ಟಿಕರ್ತನ ಮಹಿಮೆಗೆ ವಿರುದ್ಧವಾದ ಸಂದೇಶಗಳೂ ಇದ್ದರೇ, ಅವು ಆ ಸತ್ಯವಾದ ವಹಿಯ ಭಾಗವಲ್ಲ, ಅದು ಅವನ ಪ್ರವಾದಿಗಳು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ತಂದ ಸಂದೇಶವಲ್ಲ.

ಸರ್ವಶಕ್ತನಾದ ಅಲ್ಲಾಹನ ಪವಿತ್ರ ಕುರ್ಆನಿನಲ್ಲಿ ಹೇಳುತ್ತಾನೆ:

﴿قُلۡ هُوَ ٱللَّهُ أَحَدٌ ۝١ ٱللَّهُ ٱلصَّمَدُ ۝٢ لَمۡ يَلِدۡ وَلَمۡ يُولَدۡ ۝٣ وَلَمۡ يَكُن لَّهُۥ كُفُوًا أَحَدُۢ ۝٤﴾

(ಓ ಪ್ರವಾದಿಯವರೇ! ) ಹೇಳಿರಿ: ’ಅವನು ಅಲ್ಲಾಹು! ಏಕೈಕನು.

ಅಲ್ಲಾಹು ಸರ್ವರಿಗೂ ಆಶ್ರಯದಾತನಾಗಿರುವನು (ನಿರಪೇಕ್ಷಕನು).

ಅವನು(ಯಾರಿಗೂ) ಜನ್ಮ ನೀಡಿಲ್ಲ,ಅವನು (ಯಾರದೇ ಸಂತತಿಯಾಗಿ ಜನಿಸಿದವನೂ ಅಲ್ಲ.
ಅವನಿಗೆ ಸರಿಸಾಟಿಯಾಗಿ ಯಾರೂ ಇಲ್ಲ'.
[ಅಲ್-ಇಖ್ಲಾಸ್:1-4]

ಈ ಬ್ರಹ್ಮಾಂಡದ ಸೃಷ್ಟಿಕರ್ತ ಮತ್ತು ರಬ್ಬ್ ಅಲ್ಲಾಹನೆಂದು ನೀವು ವಿಶ್ವಾಸ ಹೊಂದಿದ್ದರೆ.....ನಿಮ್ಮ ಸೃಷ್ಟಿಯ ಉದ್ದೇಶವೇನೆಂದು ಈ ವಿಚಾರದಲ್ಲಿ ಯೋಚಿಸಿದ್ದೀರಾ? ನಮ್ಮ ಸೃಷ್ಟಿಯ ಉದ್ದೇಶವೇನು?

ಮತ್ತು ನಮ್ಮ ಅಸ್ತಿತ್ವದ ಉದ್ದೇಶವೇನು?

**ಅಲ್ಲಾಹನು ನಮ್ಮನ್ನು ಸೃಷ್ಟಿಸಿದ ನಂತರ ನಮಗೆ ಯಾವುದೇ ಉದ್ದೇಶ ಮತ್ತು ಮಾರ್ಗದರ್ಶನವಿಲ್ಲದೆ ಬಿಟ್ಟಿರಲು ಸಾಧ್ಯವೇ?ಅಲ್ಲಾಹು ಈ ಎಲ್ಲಾ ಸೃಷ್ಟಿಗಳನ್ನು ಯಾವುದೇ ಉದ್ದೇಶ ಅಥವಾ ಗುರಿಯಿಲ್ಲದೆ ಸೃಷ್ಟಿಸಿದ್ದಾನೆಯೇ?**

ನಿಜವಾದ ವಿಚಾರವೆಂದರೆ, ಮಹಾನ್ ಸೃಷ್ಟಿಕರ್ತ ನಮ್ಮ ರಬ್ಬ್ ಅಲ್ಲಾಹು ನಮಗೆ ನಮ್ಮ ಸೃಷ್ಟಿಯ ಉದ್ದೇಶವನ್ನು ತಿಳಿಸಿದನು.ನಮ್ಮ ಸೃಷ್ಟಿಯ ಉದ್ದೇಶವೇನೆಂದರೆ ಕೇವಲ ಅಲ್ಲಾಹನ ಇಬಾದತಿಯನ್ನು ಮಾಡುವುದು. ಅವನು ನಮ್ಮಿಂದ ಏನು ಬಯಸುತ್ತಾನೆಂಬುದು ತಿಳಿಸಿದನು, ಅವನು ಮಾತ್ರ ಆರಾಧನೆಗೆ ಹಕ್ಕುಧಾರ ಎಂದು ಅವನು ತನ್ನ ಪ್ರವಾದಿಗಳ ಮೂಲಕ ನಮಗೆ ತಿಳಿಸಿದನು, ನಾವು

ಅವನ ಆರಾಧನೆಯನ್ನು ಹೇಗೆ ಮಾಡಬೇಕು? ಅವನ ಆದೇಶಗಳನ್ನು ಪಾಲಿಸಿ ಮತ್ತು ಅವನ ನಿಷೇಧಗಳನ್ನು ತಪ್ಪಿಸಿ ಅವನ ಸಾಮಿಪ್ಯವನ್ನು ಹೇಗೆ ಪಡೆಯಬೇಕು? ಅವನ ಸಂತೋಷವನ್ನು ಹೇಗೆ ಗಳಿಸಬೇಕು ಮತ್ತು ಅವನು ವಿಧಿಸುವ ಶಿಕ್ಷೆಯಿಂದ ಹೇಗೆ ರಕ್ಷಣೆ ಪಡೆಯಬೇಕು? ಅವನು ನಮಗೆ ಇದು ಕೂಡ ತಿಳಿಸಿದನು — ನಾವು ಸಾವಿನ ನಂತರ ಯಾವ ಫಲವನ್ನು ಪಡೆಯುತ್ತೇವೆ?

ಅವನು ನಮಗೆ ತಿಳಿಸಿದನು — ಈ ಭೌತಿಕ ಜೀವನವು ಒಂದು ಪರೀಕ್ಷೆಯ ಸ್ಥಳವಾಗಿದೆ. ನಿಜವಾದ ಮತ್ತು ಪೂರ್ಣ ಜೀವನವು ಸಾವಿನ ನಂತರ ದೊರೆಯುವ ಆಖಿರತ್‌ನ ಪಾರತ್ರಿಕ ಜೀವನವಾಗಿದೆ.

ಅವನು ನಮಗೆ ತಿಳಿಸಿದನು — ಯಾವನು ಅವನ ಆದೇಶಗಳಂತೆ ಅವನ ಆರಾಧನೆಯನ್ನು ಮಾಡುತ್ತಾನೆ ಮತ್ತು ಅವನು ನಿಷೇಧಿಸಿದ ವಸ್ತುಗಳಿಂದ ದೂರವಿರುತ್ತಾನೆ, ಅವನಿಗೆ ಈ ಭೂಮಿಯಲ್ಲಿ ಉತ್ತಮ ಜೀವನ ಮತ್ತು ಆಖಿರತ್ತಿನಲ್ಲಿ ಶಾಶ್ವತ ಅನುಗ್ರಹಗಳು ದೊರೆಯುತ್ತವೆ. ಅದರ ವಿರುದ್ಧವಾಗಿ, ಯಾರು ಅವನಿಗೆ ವಿರೋಧ ವ್ಯಕ್ತಪಡಿಸಿ ಅವನ ನಿಯಮಗಳನ್ನು ಉಲ್ಲಂಘಿಸುತ್ತಾರೆ, ಅವರಿಗಾಗಿ ಈ ಭೂಮಿಯಲ್ಲಿ ದುರ್ಬಲ ಹಾಗೂ ದುಃಖಭರಿತ ಜೀವನ ಮತ್ತು ಆಖಿರತ್ತಿನಲ್ಲಿ ನಿರಂತರ ದಂಡನೆ ಇರುವುದಾಗಿದೆ.

## ನಾವು ನಮ್ಮ ಜೀವನದಲ್ಲಿ ಮಾಡಿದ ಒಳಿತು ಮತ್ತು ಕೆಡುಕಿಗೆ ಪ್ರತಿಫಲ ಸಿಗದಿರಲು ಸಾಧ್ಯವಿಲ್ಲ ಎಂದು ನಾವು ಚೆನ್ನಾಗಿ ತಿಳಿದಿದ್ದೇವೆ;ಅಕ್ರಮಿಗಳನ್ನು ಶಿಕ್ಷಿಸದೇ, ಧರ್ಮಪಾಲಕರಿಗೆ ಬಹುಮಾನ ಸಿಗದಿರಲು ಸಾಧ್ಯವೇ ಇಲ್ಲ.

ನಮ್ಮ ರಬ್ಬ್ (ಅಲ್ಲಾಹು) ನಮಗೆ ತಿಳಿಸಿದ್ದೇನೆಂದರೆ, ಅವನಿಗೆ ಶರಣಾಗುವುದು, ಸಹಭಾಗಿಗಳಿಲ್ಲದ ಅವನನ್ನು ಮಾತ್ರ ಆರಾಧಿಸುವುದು, ವಿಧೇಯತೆಯಿಂದ ಅವನಿಗೆ ಬಾಗುವುದು ಮತ್ತು ಆತನ ಶರೀಅತ್ ಅನ್ನು (ಧರ್ಮಶಾಸ್ತ್ರವನ್ನು) ಸಂತೃಪ್ತಿ ಮತ್ತು ಸ್ವೀಕಾರದಿಂದ ಪಾಲಿಸುವುದು ಮುಂತಾದವುಗಳಿಂದ ಮಾತ್ರ ಅವನ ಸಂಪ್ರೀತಿಯನ್ನು ಗಳಿಸಿ ಅವನ ಶಿಕ್ಷೆಯಿಂದ ಪಾರಾಗಲು ಸಾಧ್ಯ. ಅವನು ಮನುಷ್ಯರಿಂದ ಈ ಧರ್ಮವನ್ನು (ಇಸ್ಲಾಂ) ಹೊರತುಪಡಿಸಿ ಬೇರೆ ಯಾವುದೇ ಧರ್ಮವನ್ನು ಸ್ವೀಕರಿಸುವುದಿಲ್ಲ ಎಂದೂ ಅವನು ತಿಳಿಸಿದ್ದಾನೆ. ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ:

﴿وَمَن يَبۡتَغِ غَيۡرَ ٱلۡإِسۡلَٰمِ دِينٗا فَلَن يُقۡبَلَ مِنۡهُ وَهُوَ فِي ٱلۡأٓخِرَةِ مِنَ ٱلۡخَٰسِرِينَ٨٥﴾

ಯಾರಾದರೂ ಇಸ್ಲಾಮಿಗೆ ಹೊರತಾಗಿರುವುದನ್ನು ಧರ್ಮವಾಗಿ ಅರಸುವುದಾದರೆ ಅದನ್ನು ಅವನಿಂದ ಎಂದಿಗೂ ಸ್ವೀಕರಿಸಲಾಗದು. ಪರಲೋಕದಲ್ಲಿ ಅವನು ನಷ್ಟ ಹೊಂದಿದವರ ಪೈಕಿ

ಸೇರಿದವನಾಗುವನು.

[ಆಲಿ ಇಮ್ರಾನ್:85].

ಇಂದು ಜನರ ಪೈಕಿ ಬಹುಸಂಖ್ಯೆ ಯಾವ ವಸ್ತುಗಳಿಗೆ ಆರಾಧಿಸುತ್ತಾರೆಂದು ಗಮನಿಸಿದರೆ, ಕೆಲವರು ಮನುಷ್ಯನಿಗೆ ಆರಾಧಿಸುತ್ತಾರೆ, ಕೆಲವರು ವಿಗ್ರಹಗಳಿಗೆ, ಕೆಲವರು ನಕ್ಷತ್ರಗಳಿಗೆ, ಮತ್ತು ಕೆಲವರು ಇನ್ನುಬೇರೇನಾದರೂ ವಸ್ತುಗಳಿಗೆ ಆರಾಧನೆಯನ್ನು ಮಾಡುತ್ತಿದ್ದಾರೆ. ಇದು ಬುದ್ಧಿವಂತ ವ್ಯಕ್ತಿಗೆ ಶೋಭಿಸುವುದಿಲ್ಲ, ಅವನು ಸರ್ವಗುಣ ಸಂಪನ್ನನಾದ, ಬ್ರಹ್ಮಾಂಡದ ಸೃಷ್ಟಿಕರ್ತ, ಪಾಲಕ ಮತ್ತು ನಿಯಂತ್ರಕನಾದ ರಬ್ಬ್ ಅಲ್ಲಾಹನ ಹೊರತು ಯಾರಿಗೂ ಆರಾಧನೆಯನ್ನು ಮಾಡುವುದಿಲ್ಲ. ತನ್ನಂತೆಯೇ ಅಥವಾ ತನಗಿಂತ ಕಮ್ಮಿಯಾದ ಸೃಷ್ಟಿಯ ಆರಾಧನೆ ಹೇಗೆ ಮಾಡಬಹುದು? ಆರಾಧನೆಗೆ ಅರ್ಹನು ಒಬ್ಬ ಮನುಷ್ಯ, ವಿಗ್ರಹ, ಮರ ಅಥವಾ ಪ್ರಾಣಿ ಎಂದಿಗು ಆಗಿರಲಾರದು.

ಇಂದು ಜನರು ಇಸ್ಲಾಂ ಹೊರತುಪಡಿಸಿ ಬೇರೆ ಬೇರೆ ಧರ್ಮಗಳನ್ನು ನಂಬುತ್ತಿದ್ದಾರೆ. ಆದರೆ ಅಲ್ಲಾಹು ಅವುಗಳಲ್ಲಿ ಯಾವ ಧರ್ಮವನ್ನೂ ಸ್ವೀಕರಿಸುವುದಿಲ್ಲ. ಏಕೆಂದರೆ ಅವುಗಳಲ್ಲಿ ಕೆಲವು ಮನುಷ್ಯನಿಂದ ರಚಿಸಲ್ಪಟ್ಟ ಧರ್ಮಗಳಾಗಿವೆ ಅಥವಾ ಮೊದಲಿಗೆ ಅವು ಆಕಾಶದಿಂದ ಇಳಿಸಲಾದ ಧರ್ಮಗಳಾಗಿದ್ದರೂ, ಕಾಲಕ್ರಮೇಣ ಮನುಷ್ಯನು ಅವುಗಳಲ್ಲಿ ಬಹಳಷ್ಟು ಬದಲಾವಣೆಗಳನ್ನು ಮಾಡಿ ಅವುಗಳನ್ನು ವಿಕೃತಗೊಳಿಸಿದ್ದಾನೆ. ಆದರೆ ಇಸ್ಲಾಂ ಈ

ಬ್ರಹ್ಮಾಂಡದ ಸೃಸ್ಟಿಕರ್ತನ ಧರ್ಮವಾಗಿದೆ, ಇದು ಯಾವತ್ತೂ ಬದಲಾಗಲಾರದು ಮತ್ತು ಯಾವತ್ತೂ ದೋಷಪಡುವುದಿಲ್ಲ. ಈ ಧರ್ಮದ ಮೂಲ ಗ್ರಂಥವು ಪವಿತ್ರ ಕುರ್‌ಆನ್ ಆಗಿದ್ದು, ಅದು ಇಂದಿಗೂ ಮುಸ್ಲಿಮರ ಬಳಿ ಅಂತಿಮ ಪ್ರವಾದಿ ಮುಹಮ್ಮದ್ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ ರವರ ಮೇಲೆ ಅವತೀರ್ಣಗೊಂಡ ಮೂಲ ಭಾಷೆಯಲ್ಲೇ - ಅಂದರೆ ಅರಬಿಯಲ್ಲಿ - ಸಂಪೂರ್ಣವಾಗಿ ಸುರಕ್ಷಿತವಾಗಿ ಉಳಿದಿದೆ.

ಇಸ್ಲಾಮಿನ ಒಂದು ಮೂಲ ತತ್ವವೆಂದರೆ, ಅಲ್ಲಾಹು ಕಳುಹಿಸಿದ ಎಲ್ಲಾ ಪ್ರವಾದಿಗಳ ಮೇಲೂ ಇಮಾನ್ (ವಿಶ್ವಾಸ) ಇಡಬೇಕಾಗಿದೆ. ವಾಸ್ತವದಲ್ಲಿ ಎಲ್ಲಾ ಪ್ರವಾದಿಗಳು ಮಾನವರೇ ಆಗಿದ್ದರು ಮತ್ತು ಅಲ್ಲಾಹು ಸತ್ಯದ ಪರವಾಗಿ ಅವರನ್ನು ಬೆಂಬಲಿಸಲು ವಿವಿಧ ಸೂಚನೆಗಳು ಮತ್ತು ಚಮತ್ಕಾರಗಳ ಮೂಲಕ ಅವರಿಗೆ ಸಹಾಯ ಮಾಡಿದನು.ಇವರನ್ನು ನಿಯೋಜಿಸಿದ ಪ್ರಮುಖ ಉದ್ದೇಶವೆಂದರೆ, ಜನರಿಗೆ ಏಕೈಕ ಅಲ್ಲಾಹನಿಗೆ ಮಾತ್ರ ಆರಾಧನೆಯನ್ನು ಸಲ್ಲಿಸಲು ಆಹ್ವಾನ ನೀಡುವುದು.

ಕೊನೆಯ ಪ್ರವಾದಿ ಮುಹಮ್ಮದ್ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಆಗಿದ್ದಾರೆ. ಅಲ್ಲಾಹು ಅವರನ್ನು ಅಂತಿಮ ದಿವ್ಯ ಧರ್ಮ ಶಾಸನ (ಶರೀಯತ್) ಜೊತೆಗೆ ಕಳುಹಿಸಿದನು, ಇದರಿಂದ ಹಿಂದಿನ ಎಲ್ಲಾ ಧರ್ಮ ಶಾಸನಗಳು ರದ್ದುಗೊಳಿಸಲ್ಪಟ್ಟವು. ಅಲ್ಲಾಹು ಅವರಿಗೆ

ಮಹತ್ವಪೂರ್ಣ ಚಿಹ್ನೆಗಳ ಮೂಲಕ ಬೆಂಬಲಿಸಿದನು, ಅವುಗಳಲ್ಲಿ ಎಲ್ಲದಕ್ಕಿಂತ ದೊಡ್ಡ ಚಿಹ್ನೆ ಪವಿತ್ರ ಕುರ್‌ಆನ್ ಆಗಿದೆ,ಪವಿತ್ರ ಕುರ್'ಆನ್ ಈ ಬ್ರಹ್ಮಾಂಡದ ಸೃಸ್ಟಿಕರ್ತನ ವಾಣಿಯಾಗಿದೆ. ಇದು ಮಾನವ ಸಮಾಜಕ್ಕೆ ದೊರೆಯುವ ಅತ್ಯಂತ ಮಹಾನ್ ಗ್ರಂಥವಾಗಿದೆ. ಅದರ ವಿಷಯ, ಪದಗಳು, ಕ್ರಮ ಮತ್ತು ಆದೇಶಗಳಲ್ಲಿ ಅದು ಒಂದು ಚಮತ್ಕಾರವಾಗಿದೆ. ಇದರಲ್ಲಿ ಸತ್ಯವಾದ ಮಾರ್ಗವನ್ನು ವಿವರಿಸಲಾಗಿದೆ, ಅದು ಪ್ರಪಂಚ ಮತ್ತು ಪರಲೋಕದ ಕಲ್ಯಾಣಕ್ಕೆ ಮಾರ್ಗದರ್ಶನ ನೀಡುತ್ತದೆ. ಕುರ್'ಆನ್ ಅರಬಿ ಭಾಷೆಯಲ್ಲಿ ಇಳಿಸಲ್ಪಟ್ಟಿದೆ.

ಈ ವಿಚಾರದಲ್ಲಿ ಅನೇಕ ತಾರ್ಕಿಕ ಮತ್ತು ವೈಜ್ಞಾನಿಕ ಪ್ರಮಾಣಗಳು ಇವೆ, ಕುರ್'ಆನ್ ಈ ಲೋಕದ ಪವಿತ್ರ ಮತ್ತು ಸರ್ವಶಕ್ತ ಸೃಷ್ಟಿಕರ್ತನ ವಾಣಿ ಎಂದು ಯಾವುದೇ ಸಂದೇಹವಿಲ್ಲದೆ ಸಾಬೀತಾಗುತ್ತದೆ. ಈ ರೀತಿಯ ಪುಸ್ತಕವನ್ನು ಯಾವುದೇ ಮಾನವನು ಬರೆಯಲಾಗದು.ಮತ್ತು ಇದು ಮಾನವ ನಿರ್ಮಿತ ಪುಸ್ತಕವಾಗಲೂ ಸಾಧ್ಯವಿಲ್ಲ.

ಇಸ್ಲಾಂನ ಮೂಲ ತತ್ವಗಳಲ್ಲಿ ಮಲಾಯಿಕರನ್ನು ನಂಬುವುದು, ಅಂತಿಮ ದಿನವನ್ನು ನಂಬುವುದು ಮತ್ತು ಆ ದಿನ ಅಲ್ಲಾಹನು ಜನರನ್ನು ಸಮಾಧಿಯಿಂದ ಎಬ್ಬಿಸಿ ಅವರ ಕರ್ಮಗಳಿಗೆ ಅನುಗುಣವಾಗಿ ಲೆಕ್ಕ ಪರಿಶೀಲಿಸುವನು ಎಂಬುದು ಸೇರಿದೆ. ಒಳ್ಳೆಯ ಕೆಲಸ ಮಾಡಿ ನಂಬಿಕೆಯಿಟ್ಟವರಿಗೆ ಸ್ವರ್ಗದಲ್ಲಿ ಶಾಶ್ವತ ಸುಖವಿದೆ. ಕೆಟ್ಟ ಕೆಲಸ ಮಾಡಿ

ನಂಬಿಕೆವಿರಿಸದವರಿಗೆ ನರಕದಲ್ಲಿ ಶಾಶ್ವತ ಶಿಕ್ಷೆಯಿದೆ. ಇಸ್ಲಾಂನ ಮೂಲ ತತ್ವಗಳಲ್ಲಿ ದೇವರು ನಿರ್ಧರಿಸಿದ ಒಳ್ಳೆಯದು ಮತ್ತು ಕೆಟ್ಟದ್ದನ್ನು ನಂಬುವುದು ಸೇರಿದೆ.

ಇಸ್ಲಾಂ ಧರ್ಮವು ವಾಸ್ತವದಲ್ಲಿ ಪೂರ್ಣವಾದ ಜೀವನ ನಿಯಮವಾಗಿದೆ, ಇದು ಮಾನವ ಸ್ವಭಾವ ಮತ್ತು ತಾರ್ಕಿಕತೆಗೂ ಅನುಗುಣವಾಗಿದೆ ಮತ್ತು ಇದು ಶುದ್ಧ ಆತ್ಮಗಳನ್ನು ಆತ್ಮಸಂತೋಷದಿಂದ ಒಪ್ಪಿಗೆಯಾಗುತ್ತದೆ. ಈ ವಿಶಾಲ ನಿಯಮವನ್ನು ಸರ್ವಶಕ್ತ ಸೃಷ್ಟಿಕರ್ತನು ತನ್ನ ಸೃಷ್ಟಿಗೆ ಸಿದ್ಧಪಡಿಸಿದ್ದಾನೆ. ಇದು ಪ್ರಪಂಚ ಮತ್ತು ಪರಲೋಕದಲ್ಲಿ ಎಲ್ಲ ಜನರಿಗೂ ಸಂತೋಷವನ್ನು ನೀಡುವ ಧರ್ಮವಾಗಿದೆ. ಇದರಲ್ಲಿ ಜಾತಿ ಮತ್ತು ಬಣ್ಣದ ಆಧಾರದಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಇದರ ದೃಷ್ಟಿಯಲ್ಲಿ ಎಲ್ಲಾ ಜನರೂ ಸಮಾನರಾಗಿದ್ದಾರೆ. ಇದು ಪ್ರತಿಯೊಬ್ಬ ವ್ಯಕ್ತಿಗೆ ಅವನ ಉತ್ತಮ ಕರ್ಮಗಳ ಪ್ರಮಾಣದಲ್ಲಿ ಮಾತ್ರ ಇತರರಿಗಿಂತ ಹೆಚ್ಚಿನ ಗೌರವವನ್ನು ನೀಡುತ್ತದೆ.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿مَنْ عَمِلَ صَٰلِحًا مِّن ذَكَرٍ أَوْ أُنثَىٰ وَهُوَ مُؤْمِنٌ فَلَنُحْيِيَنَّهُۥ حَيَوٰةً طَيِّبَةً وَلَنَجْزِيَنَّهُمْ أَجْرَهُم بِأَحْسَنِ مَا كَانُوا۟ يَعْمَلُونَ ﴿٩٧﴾﴾

"ಗಂಡಾಗಲಿ, ಹೆಣ್ಣಾಗಲಿ ಸತ್ಯವಿಶ್ವಾಸಿಯಾಗಿರುತ್ತಾ ಯಾರು ಸತ್ಕರ್ಮಗಳನ್ನು ಮಾಡುವರೋ ಖಂಡಿತವಾಗಿಯೂ ನಾವು ಆ ವ್ಯಕ್ತಿಗೆ ಉತ್ತಮವಾದ ಬದುಕನ್ನು ನೀಡುವೆವು. ಅವರು

ಮಾಡುತ್ತಿರುವ ಕರ್ಮಗಳಲ್ಲಿ ಅತ್ಯುತ್ತಮವಾಗಿರುವುದಕ್ಕೆ ಅನುಗುಣವಾಗಿ ನಾವು ಅವರಿಗಿರುವ ಪ್ರತಿಫಲವನ್ನು ನೀಡುವೆವು."

[ಅನ್ನಹ್ಲ್: 97].

ಪವಿತ್ರ ಕುರ್‌ಆನ್‌ನಲ್ಲಿ ಅಲ್ಲಾಹನು ದೃಢಪಡಿಸುವ ಒಂದು ವಿಷಯವೇನೆಂದರೆ, ಅಲ್ಲಾಹನನ್ನು ರಬ್ಬ್ (ಪರಿಪಾಲಕ) ಮತ್ತು ಆರಾಧ್ಯನೆಂದು, ಇಸ್ಲಾಂ ಅನ್ನು ಧರ್ಮವೆಂದು, ಮತ್ತು ಮುಹಮ್ಮದ್ (ಸ) ರನ್ನು ಸಂದೇಶವಾಹಕರೆಂದು ವಿಶ್ವಾಸವಿಡುವುದು ಮನುಷ್ಯನಿಗೆ ಯಾವುದೇ ಆಯ್ಕೆ ಇಲ್ಲದ ಒಂದು ಕಡ್ಡಾಯ ವಿಷಯವಾಗಿದೆ. ಪುನರುತ್ಥಾನ ದಿನದಂದು ವಿಚಾರಣೆ ಮತ್ತು ಪ್ರತಿಫಲವಿದೆ; ಯಾರು ಸತ್ಯವಿಶ್ವಾಸಿಯಾಗಿದ್ದರೋ ಅವರಿಗೆ ಮಹಾ ಜಯ ಮತ್ತು ಯಶಸ್ಸು ಸಿಗಲಿದೆ, ಮತ್ತು ಯಾರು ಸತ್ಯನಿಷೇಧಿಯಾಗಿದ್ದರೋ ಅವರಿಗೆ ಸ್ಪಷ್ಟವಾದ ನಷ್ಟವಿದೆ.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿... وَمَن يُطِعِ ٱللَّهَ وَرَسُولَهُۥ يُدۡخِلۡهُ جَنَّٰتٖ تَجۡرِي مِن تَحۡتِهَا ٱلۡأَنۡهَٰرُ خَٰلِدِينَ فِيهَاۚ
وَذَٰلِكَ ٱلۡفَوۡزُ ٱلۡعَظِيمُ ١٣ وَمَن يَعۡصِ ٱللَّهَ وَرَسُولَهُۥ وَيَتَعَدَّ حُدُودَهُۥ يُدۡخِلۡهُ نَارًا خَٰلِدٗا
فِيهَا وَلَهُۥ عَذَابٞ مُّهِينٞ ١٤﴾

ಯಾರು ಅಲ್ಲಾಹುವನ್ನು ಮತ್ತು ಅವನ ಸಂದೇಶವಾಹಕರನ್ನು ಅನುಸರಿಸುವರೋ ಅವರನ್ನು ಅಲ್ಲಾಹು ತಳಭಾಗದಿಂದ ನದಿಗಳು ಹರಿಯುವ ಸ್ವರ್ಗೋದ್ಯಾನಗಳಲ್ಲಿ ಪ್ರವೇಶ ಮಾಡಿಸುವನು.

ಅವರು ಅದರಲ್ಲಿ ಶಾಶ್ವತವಾಗಿ ವಾಸಿಸುವರು. ಅದು ಮಹಾ ವಿಜಯವಾಗಿದೆ.

ಯಾರು ಅಲ್ಲಾಹುವಿಗೆ ಮತ್ತು ಅವನ ಸಂದೇಶವಾಹಕರಿಗೆ ಅವಿಧೇಯತೆ ತೋರುವರೋ ಮತ್ತು ಅವನ (ನಿಯಮ) ವ್ಯಾಪ್ತಿಗಳನ್ನು ಮೀರುವರೋ ಅವರನ್ನು ಅಲ್ಲಾಹು ನರಕಾಗ್ನಿಗೆ ಪ್ರವೇಶ ಮಾಡಿಸುವನು. ಅವನು ಅದರಲ್ಲಿ ಶಾಶ್ವತವಾಗಿ ವಾಸಿಸುವನು.ಅವನಿಗೆ ಅಪಮಾನಕರವಾದ ಶಿಕ್ಷೆಯಿದೆ.

[ಅನ್ನಿಸಾ:13-14].

❋❋❋

# ಪರಿವಿಡಿ


ಇಸ್ಲಾಮ್ .......... 2

ಸಹಜ, ತಾರ್ಕಿಕ ಮತ್ತು ನೈಸರ್ಗಿಕ ಧರ್ಮ .......... 2

ನಿಮ್ಮನ್ನು ಸೃಷ್ಟಿಸಿದವರು ಯಾರು? .......... 2

ಅಲ್ಲಾಹನು ನಮ್ಮನ್ನು ಸೃಷ್ಟಿಸಿದ ನಂತರ ನಮಗೆ ಯಾವುದೇ ಉದ್ದೇಶ ಮತ್ತು ಮಾರ್ಗದರ್ಶನವಿಲ್ಲದೆ ಬಿಟ್ಟಿರಲು ಸಾಧ್ಯವೇ?ಅಲ್ಲಾಹು ಈ ಎಲ್ಲಾ ಸೃಷ್ಟಿಗಳನ್ನು ಯಾವುದೇ ಉದ್ದೇಶ ಅಥವಾ ಗುರಿಯಿಲ್ಲದೆ ಸೃಷ್ಟಿಸಿದ್ದಾನೆಯೇ? .......... 7

ನಾವು ನಮ್ಮ ಜೀವನದಲ್ಲಿ ಮಾಡಿದ ಒಳಿತು ಮತ್ತು ಕೆಡುಕಿಗೆ ಪ್ರತಿಫಲ ಸಿಗದಿರಲು ಸಾಧ್ಯವಿಲ್ಲ ಎಂದು ನಾವು ಚೆನ್ನಾಗಿ ತಿಳಿದಿದ್ದೇವೆ;ಅಕ್ರಮಿಗಳನ್ನು ಶಿಕ್ಷಿಸದೇ, ಧರ್ಮಪಾಲಕರಿಗೆ ಬಹುಮಾನ ಸಿಗದಿರಲು ಸಾಧ್ಯವೇ ಇಲ್ಲ. .......... 9


❊❊❊

هدية

HĀDIYAH

## The Encyclopedia of Ar-Rahman's Guests

Selected material for Pilgrims and Um-rah teaching it in languages of the world.